**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.5774/2021**

ಪಿರ್ಯಾದುದಾರರು:- ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿ:- ಸನತ್ ಕುಮಾರ್ ವಿ ಬಿನ್ ಲೇಟ್. ವೆಂಕಟೇಶ,
ವಯಸ್ಸುಃ 24 ವರ್ಷ,
ವಾಸಃ ವಾರ್ಡ್ ನಂ.30,
ಸ್ಟೇಷನ್ ರೋಡ್ ಅಗ್ರಹಾರ ಶಾಮಣ್ಣಾ ಲೇಔಟ್,
ಚಿಂತಾಮಣಿ ಟೌನ್,
ಚಿಕ್ಕಬಳ್ಳಾಪುರ ಜಿಲ್ಲೆ.

## ಆಪಾದನೆ

ಶ್ರೀಮತಿ. ಶಿಲ್ಪಶ್ರೀ ಎನ್. ಎಸ್ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ: 18.02.2021 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಬೈಲನರಸಾಪುರ - ನಂದಗುಡಿ ಮುಖ್ಯರಸ್ತೆಯಲ್ಲಿ ಗಿಡ್ಡನಹಳ್ಳಿ ಗೇಟ್ ಬಳಿ ಹೊಸದಾಗಿ ನಿರ್ಮಾಣ ಮಾಡಿರುವ ಆಂಜಿನೇಯಸ್ವಾಮಿ ದೇವಸ್ಥಾನದ ಬಳಿ ಆರೋಪಿಯಾದ ನೀವು AP-39-T-7279 ಅಶೋಕ ಲೈಲ್ಯಾಂಡ್ ಕಂಪನಿಯ ಲಾರಿ ಚಾಲಕನಾಗಿದ್ದು. ಆರೋಪಿ ಲಾರಿ ಚಾಲಕ ಬೈಲನರಸಾಪುರ ಕಡೆಯಿಂದ ನಂದಗುಡಿ ಕಡೆಗೆ AP-39-T-7279 ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬಲಭಾಗದಲ್ಲಿದ್ದ ಒಂದು ಸಿಲ್ವರ್ ಮರಕ್ಕೆ ಡಿಕ್ಕಿ ಹೊಡೆಸಿ. ನಂತರ ರಸ್ತೆಯ ಎಡಭಾಗದಲ್ಲಿ ಪುಟ್ಪಾತ್ ನಲ್ಲಿ ನಿಲ್ಲಿಸಿದ್ದ 1) KA50-EC-7690 ನೊಂದಣಿ ಸಂಖ್ಯೆ TVS STAR CITY ಮೋಟಾರ್ ಸೈಕಲ್, 2) KA-43-Q-9236 HONDA SHINE ಮೋಟಾರ್ ಸೈಕಲ್ ಮತ್ತು 3) KA-53-ED-0303 ನೊಂದಣಿ ಸಂಖ್ಯೆಯ MAESTRO ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆಸಿದ್ದರ ಪರಿಣಾಮ 1) KA- 50-EC-7690,

2) KA-43-Q-9236 3) KA-53-ED-0303 ವಾಹನಗಳು ಜಖಂಗೊಂಡಿರುತ್ತವೆ ಎಂದು ಆರೋಪಿಸಲಾಗಿದೆ.

ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.279, ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?
ಉತ್ತರ:

ಪ್ರಶ್ನೆ2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರ:

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 24.06.2025 ರಂದು ಧೃಢೀಕರಿಸಿದ್ದೇನೆ.

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**